ಚಮ್ಮಾರ ಸ್ತ್ರೀಯರ ಗಾಳಿ ಕೂಡ ಸುಳಿಯುತ್ತಿರಲಿಲ್ಲ. ಆಮೇಲೆ ನಾನು ಯಾವಾಗ ಇಲ್ಲಿಗೆ ಕಾಲಿಟ್ಟೆನೋ ಅಲ್ಲಿಂದಿಚೆಗೆ ನಡತೆಗೆಟ್ಟ ಪ್ರಪಂಚದ ಭಾಗವಾಗಿ ಹೋದೆ ನಾನು. ನನ್ನ ಪತಿ ದಯಾಳು, ನೀತಿಶೀಲ ಹಾಗೂ ಸಮರ್ಥವ್ಯಕ್ತಿ, ದಿಟ! ಈ ಗುಣಗಳ ಆಧಾರದ ಮೇಲೆ ನನ್ನ ತಂದೆ ಅವರನ್ನು ತಮ್ಮ ಅಳಿಯನನ್ನಾಗಿ ಆರಿಸಿಕೊಂಡರು. ಆದರೆ, ನನ್ನ ತಂದೆಗೆ ಈ ಮಂದಿ ಮಡಿ ಮೈಲಿಗೆಇಲ್ಲದ ಹಾದಿ ತುಳಿದಿರುವರೆಂದು ತಿಳಿಯದು. ಸಂಜೆಯ ಪೂಜೆಪುನಸ್ಕಾರದ ಮಾತಿರಲಿ, ಇಲ್ಲಿ ಯಾರೊಬ್ಬರು ನಿತ್ಯ ಸ್ನಾನ ಸಹ ಮಾಡುತ್ತಿರಲಿಲ್ಲ. ನನ್ನ ಪತಿ ಕುಳಿತುಕೊಳ್ಳುವ ದಿವಾನ ಖಾನೆಗೆ ಮುಸ್ಲಿಮರು ಕ್ರಿಶ್ಚಿಯನ್ನರು, ಎಲ್ಲರೂ ಬಂದು ಹೋಗ್ತಾರೆ. ನನ್ನವರು ಅಲ್ಲಿ ಅವರೊಡನೆ ಕುಳಿತು ನೀರು, ಹಾಲು, ಚಹ ಕುಡಿಯುತ್ತಾರೆ. ಅಲ್ಲದೆ ಅಲ್ಲಿ ಸಿಹಿಖಾದ್ಯಗಳನ್ನು ಸಹ... ನಿನ್ನೆ ತಾನೆ, ಅವರ ಸಂಗಡ ನನ್ನವರು ನಿಂಬೆಪಾನಕ ಕುಡಿಯುತ್ತಿದ್ದುದನ್ನು ಕಂಡೆ. ಆ ಚಮ್ಮಾರ ಹೆಂಗ್ಸು, ಬೀಡುಬೀಸಾಗಿ ಸೀದಾ ಮನೆ ಒಳೀಕೆ ಬರ್ತಾಳೆ. ನನ್ನ ಗಂಡ ಮುಸ್ಲಿಮರ ಮನೆಗಳಿಗೆ ಊಟಕ್ಕೆ ಹೋಗ್ತಾರೆಂದು ಸಹ ತಿಳಿದು ಬಂತು ನನಗೆ.

ಇದನ್ನೆಲ್ಲ ಸಹಿಸಿಕೊಳ್ಳಲು ನನ್ನಿಂದ ಇನ್ನು ಸಾಧ್ಯವಿಲ್ಲ. ನನ್ನ ಇಡೀ ಅಸ್ತಿತ್ವ ತಿರಸ್ಕಾರದಿಂದ ತುಂಬಿ ತುಳುಕುತ್ತಿದೆ. ನನ್ನ ಗಂಡ ನನ್ನ ಸನಿಹ ಬಂದು, ನನ್ನ ಕೈಯನ್ನು ಅವರ ಕೈಲಿ ಹಿಡಿದು ಮುಗುಳ್ನಗುತ್ತ ಕುಳಿತಾಗ ಈ ಇಳೆ ಯಾಕಾದರೂ ಬಾಯ್‌ಬಿಟ್ಟು ನನ್ನನ್ನು ಅಪೋಷಣ ತೆಗೆದುಕೊಳ್ಳಬಾರದು ಎಂದೆಲ್ಲ ಯೋಚಿಸಿರುವೆ. ಓ ಹಿಂದೂ ಗೋತ್ರವೆ! ಸ್ತ್ರೀಯಳ ಇಡೀ ಬಾಳ್ವೆ ಪುರುಷನ ದಾಸ್ಯದಾಳಾಗಿರುವುದು ಆಕೆಯ ಆದ್ಯಕರ್ತವ್ಯವೆನ್ನುವಂತೆ ಮಾಡಿರುವೆಯ? ನಮ್ಮ ಒಪ್ಪುನೆಪ್ಪುಗಳಿಗೆ, ನಮ್ಮ ನೀತಿ ನಿಯಮಗಳಿಗೆ, ಅಲ್ಲದೆ ನಮ್ಮ ಧರ್ಮಕ್ಕೂ ಬೆಲೆ ಇಲ್ಲದಂತಾಗಿದೆಯಲ್ಲ, ಓ ದೇವರೆ!

* * *

ನನ್ನಿಂದ ಇನ್ನು ಸಹಿಸಕ್ಕಾಗೊಲ್ಲ. ಸದ್ಯದ ಸ್ಥಿತಿಗತಿ ಇಂದೇ ಅಂತ್ಯಗೊಳ್ಳಬೇಕು. ಈ ಅತಿಮಾನುಷ ಬಲೆಯಿಂದ ನಾನು ಹೊರಬರಬೇಕಿದೆ. ನನ್ನ ತಂದೆಯೊಂದಿಗೆ ನಾನು ಆಶ್ರಿತಳಾಗಿರಲು ನಿಶ್ಚಯಿಸಿರುವೆ. ಇಂದು ಇಲ್ಲಿ, ಸಮಾನಮನಸ್ಕರ ಸಹಭೋಜನ ವ್ಯವಸ್ಥೆ ಏರ್ಪಟ್ಟಿದೆ. ನನ್ನ ಗಂಡ ಇದರಲ್ಲಿ ಭಾಗವಹಿಸುವುದೊಂದೇ ಅಲ್ಲ, ಅವರೇ ಅದರ ಪ್ರಧಾನ ಸಂಘಟಕರೂ ಕೂಡ. ಈ ಅಧರ್ಮದ ದೌರ್ಜನ್ಯವನ್ನು ಅವರು ನಡೆಸುತ್ತಿರುವುದಕ್ಕೆ ಅವರ ದುಡಿತ ಮತ್ತು ಸ್ಫೂರ್ತಿಗೆ ಧನ್ಯವಾದಗಳು. ನೂರೆಂಟು ಸಕಲ ಜಾತಿ ಜನಾಂಗದವರು ಒಟ್ಟಿಗೆ ಕಲೆತು ತಿನ್ನುತ್ತಿರುವರು. ಮುಸ್ಲಿಮರು ಸಹಪಂಕ್ತಿ ಭೋಜನದಲ್ಲಿ ಭಾಗವಹಿಸುತ್ತಿರುವರೆಂಬ ಸುದ್ದಿ ಕೇಳಿದೆ. ಆಕಾಶ ಏಕೆ ಕುಸಿಯಬಾರದು? ಧರ್ಮ ರಕ್ಷಣೆಗೆ ದೇವರೇಕೆ ಭೂಮಿಗೆ ಧಾವಿಸುತ್ತಿಲ್ಲ? ಬ್ರಾಹ್ಮಣರು ಅವರ ನಿಕಟವರ್ತಿಗಳನ್ನು ಹೊರತುಪಡಿಸಿ ಇತರೆ ಬ್ರಾಹ್ಮಣರು ಮಾಡಿದ ಅಡುಗೆಯನ್ನು ಸಹ ಮೂಸಿ ನೋಡರು. ಅಂತಹದರಲ್ಲಿ ಈಗ ಇಲ್ಲಿ, ಈ ಶ್ರೇಷ್ಠ ಸಮುದಾಯ ಕಾಯಸ್ತ, ಬನಿಯಾ ಹಾಗೂ ಮುಸ್ಲಿಮರ ಜೊತೆ ಕುಳಿತು ತಿನ್ನಲು ನಾಚಿಕೆ ಆಗಬಾರದಾ ಅವರಿಗಾದರೂ? ಬದಲಿಗೆ ಏಕತೆಯ ಸಂಕೇತವಾಗಿ ಸಹ ಪಂಕ್ತಿಯ ಸಹಭೋಜನ ಮಾಡುವುದರಲ್ಲಿ ಅವರಿಗೆ ಹೆಮ್ಮೆ ಇದೆಯಂತೆ, ಏನು ಹುಚ್ಚಾಟ!

## ಪತಿ

ಈ ರಾಷ್ಟ್ರದ ಹೆಂಗಳೆಯರಿಗೆ ಅದ್ಯಾವಾಗ ಜ್ಞಾನೋದಯವಾಗಿ ರಾಷ್ಟ್ರೀಯತೆಯ ಏಕತೆಗೆ ಪುರುಷರ ಜೊತೆ ಬೆಂಬಲವಾಗಿ ನಿಲ್ಲುತ್ತಾರೋ? ಬ್ರಾಹ್ಮಣರ ಮಸಲತ್ತಿನ ಬಲೆಯೊಳಗೆ ನಾವು ಇನ್ನೆಷ್ಟು ದಿನ ಹೀಗೆ ಕಾಲ ನೂಕಬೇಕು? ಪುರುಷ ಮತ್ತು ಸ್ತ್ರೀ ನಡುವಿನ ಸಾಮರಸ್ಯ ಹಾಗೂ ಏಕರೂಪತೆಯ ಅಭಿಪ್ರಾಯಗಳು ಜಾತಿ ಮತ್ತು ಗೋತ್ರಕ್ಕಿಂತ ಬಹು ಮುಖ್ಯವೆನ್ನುವುದನ್ನು ನಮ್ಮ ವೈವಾಹಿಕ ವ್ಯವಸ್ಥೆ ಯಾವಾಗ ಅಂಗೀಕರಿಸುತ್ತದೆ? ಇವು ಅಂಗೀಕಾರಗೊಂಡಿವೆಯಾದರೆ ನಾನಾಗ ವೃಂದಳ ಪತಿ ಎನಿಸೆ. ಅಂತೆಯೇ ಆಕೆ ನನ್ನ ಪತ್ನಿ ಎನಿಸಲು ನನಗೆ. ನಮ್ಮ ಚಿಂತನೆಗಳು ಆಗ ಭೂಮಿ ಮತ್ತು ಆಕಾಶದಷ್ಟು ಅಂತರದಲ್ಲಿ ಉಳಿಯುತ್ತವೆ. ಇದನ್ನು ಅವಳು ನನಗೆ ಸ್ಪಷ್ಟವಾಗಿ ಹೇಳದಿದ್ದರೂ, ನನ್ನ ಆಲೋಚನಾ ವಿಧಾನದಿಂದ ಅವಳು ತೀವ್ರವಾಗಿ ಅಸಹ್ಯಗೊಂಡಿರುವಳೆಂದು ನನಗೆ ಖಾತ್ರಿಯಾಗಿದೆ. ನಾನು ಆಕೆಯನ್ನು ಸ್ಪರ್ಶಿಸುವುದನ್ನೂ ಸಹ ಆಕೆ